ಇ) ಬಾಕಿ ಉಳಿದ ಜಮೀನು ಕಬಜೆ ಪಡೆಯಲು ಇರುವ ಅಡೆತಡೆಗಳು ಏನು;

ಈ) ಸದರಿ ಕೈಗಾರಿಕಾ ಎಸ್ಟೇಟನ್ನು ಇನ್ನೂ ಎಷ್ಟು ದಿವಸಗಳಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಶಿಗ್ಗಾಂವ ತಾಲ್ಲೂಕಿನ ಶಿಗ್ಗಾಂವ ಗ್ರಾಮದಲ್ಲಿ 31-05 ಎಕರೆ ಜಮೀನನ್ನು ಅಂತಿಮ ಅಧಿಸೂಚನೆಯನ್ವಯ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಸವಣೂರು ಗ್ರಾಮದಲ್ಲಿ 16-23 ಎಕರೆ ಜಮೀನಿನ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಭೂ ಸ್ವಾಧೀನ ನಡವಳಿಕೆಯನ್ನು ನಡೆಸಲಾಗುತ್ತಿದೆ. ಈಗಾಗಲೇ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಆ) ಶಿಗ್ಗಾಂವ ಗ್ರಾಮದಲ್ಲಿ 17-23 ಎಕರೆ ಜಮೀನಿನ ಕಬಜೆಯನ್ನು ಪಡೆಯಲಾಗಿದೆ. ಸವಣೂರು ಗ್ರಾಮದಲ್ಲಿನ 16–23 ಎಕರೆ ಜಮೀನಿನ ಕಬಜೆಯನ್ನು ಪಡೆದಿರುವುದಿಲ್ಲ.

ಇ) ಶಿಗ್ಗಾಂವ ಗ್ರಾಮದ 13-19 ಎಕರೆ ಜಮೀನುಗಳನ್ನು ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಕಬಜೆಯನ್ನು ಪಡೆಯಲಾಗಿರುವುದಿಲ್ಲ.

ಸವಣೂರು ಗ್ರಾಮದಲ್ಲಿನ 16-23 ಎಕರೆ ಜಮೀನಿನ ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವ ಅಡೆತಡೆಯೂ ಇರುವುದಿಲ್ಲ. ಭೂ ಸ್ವಾಧೀನ ನಡೆವಳಿಕೆ ಪೂರ್ಣಗೊಂಡ ನಂತರ ಕಬಜೆ ಪಡೆಯಲಾಗುವುದು.

ಈ) ಶಿಗ್ಗಾಂವ ಕೈಗಾರಿಕಾ ವಸಾಹತುವಿನಲ್ಲಿ 4 ಸಿ. ಹಾಗೂ 4 ಸೂಪರ್ ಮಿನಿ ಮಾದರಿಯ ಶೆಡ್ಡುಗಳನ್ನು ಪ್ರಸ್ತುತ ವರ್ಷ 1992-93ರಲ್ಲಿ ನಿರ್ಮಾಣ ಮಾಡಲು ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬಂಕಾಪುರ, ಸವಣೂರು ತಾಲ್ಲೂಕ ಮತ್ತೂರ ಗ್ರಾಮಗಳಲ್ಲಿ ಪೊಲೀಸ್ ಠಾಣೆ ತೆರೆಯುವುದು

125 (681) ಶ್ರೀ ಮಂಜುನಾಥ ಸಿ.ಕುನ್ನೂರ (ಶಿಗ್ಗಾಂವ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರ ಗ್ರಾಮ ಹಾಗೂ ಸವಣೂರು ತಾಲ್ಲೂಕು ಮತ್ತೂರ ಗ್ರಾಮಗಳಿಗೆ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಲಾಗುವುದೇ;

ಆ) ಹಾಗಿದ್ದಲ್ಲಿ ಸರ್ಕಾರ ಅಲ್ಲಿ ಪೊಲೀಸ್ ಠಾಣೆಗಳನ್ನು ಯಾವಾಗ ಪ್ರಾರಂಭಿಸುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಕರ್ನಾಟಕ ಸರ್ಕಾರ ಸಚಿವಾಲಯದ 1992ರ ಸೇವಾ ನಿಯಮಾವಳಿಗಳು

126 (686) ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, (ಬೇಲೂರು)